


## ಶಾಲೆಗೆ ಸೇರಿಸುವಾಗ..

ಮಗುವಿನ ಹೆರಿಗೆಗೆ ಮುನ್ನವೇ ಅಪ್ಪ– –ಅಮ್ಮ ಶಾಲೆಯ ಬಗ್ಗೆ ಯೋಚಿಸಬೇಕು. ಮನೆ ಕಟ್ಟುವಾಗ ಒಳ್ಳೆಯ ಶಾಲೆ ಹತ್ತಿರವಿದೆಯೇ ಯೋಚಿಸಬೇಕು. ಯಾವ ತಿಂಗಳಿನಲ್ಲಿ ಮಗು ಹುಟ್ಟುತ್ತದೆ ಎನ್ನುವ ಬಗೆಗೂ ಅಪ್ಪ– ಅಮ್ಮ ತಲೆ ಕೆಡಿಸಿಕೊಳ್ಳಬೇಕು! ಜುಲೈ ನಂತರ ಹುಟ್ಟಿದರೆ ಮಗು ಒಂದು ವರ್ಷ ಲೇಟಾಗಿ ಒಂದನೇ ಕ್ಲಾಸು ಆರಂಭಿಸಬೇಕು ಎನ್ನುವ ಚಿಂತೆ!

ಪಠ್ಯಕ್ರಮ ಯಾವುದೇ ಇರಲಿ, ೫ನೇ ತರಗತಿಯವರೆಗೆ ಮಕ್ಕಳ ಪಠ್ಯಪುಸ್ತಕಗಳ ಬಗೆಗೆ, ಶಾಲೆಯ ಬೋಧನಾ ಕ್ರಮದ ಬಗೆ ಅಪ್ಪ–– ಅಮ್ಮ ಅವಲೋಕಿಸಲೇಬೇಕು. ನಂತರದ ತರಗತಿಗಳು ಮಕ್ಕಳಿಗೆ ಸ್ವಅಧ್ಯಯನ ರೂಢಿಯಾಗಬೇಕು. ಆದರೆ ಹಿರಿಯರ ಮೇಲ್ವಿಚಾರಣೆ ಅಗತ್ಯವಿದೆ. ಆಗಾಗ್ಗೆ ಚರ್ಚೆ, ಇತರ ಚಟುವಟಿಕೆಗಳು, ಮನೆಯ ಕೆಲಸ ಕಾರ್ಯಗಳಲ್ಲಿ ಮಕ್ಕಳನ್ನು ತೊಡಗಿಸುವುದು ಅತ್ಯವಶ್ಯ. ಜೀವನ ಕೌಶಲಗಳನ್ನು ಕಲಿಯದೆ ಮಕ್ಕಳು ಜೀವನದಲ್ಲಿ ಸುಖಿಗಳಾಗಿರಲು ಸಾಧ್ಯವಿಲ್ಲ. ಅಂದರೆ 'ನೀನೇನೂ ಕೆಲಸ ಮಾಡುವುದು ಬೇಡ, ಓದಿ ಮಾರ್ಕ್ಸ್ ತೆಗೆದರೆ ಸಾಕು' ಎನ್ನುವ ಅಪ್ಪ– ಅಮ್ಮ ತಾವು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಡ್ಡಗಾಲು ಹಾಕುತ್ತಿದ್ದೇವೆ ಎಂಬುದನ್ನು ತಿಳಿಯಬೇಕು.

ಶಾಲೆಯಲ್ಲಿ ಏನೇ ಆಟ– ಪಾಠಗಳನ್ನು ಮಾಡಿಸಲಿ, ಮಕ್ಕಳಿಗೆ ಶಾಲೆಯೊಂದು 'ಕಟ್ಟುಪಾಡು' ಎನಿಸುವುದು ಸಹಜವೇ. ಅವರದ್ದು– ತಮ್ಮ ಸ್ವಾತಂತ್ರ್ಯವನ್ನು ಬೇರೆಯವರಿಗೆ ಒಪ್ಪಿಸಿದ ಅನುಭವ! ಚಿಕ್ಕ ಮಕ್ಕಳು ಇದನ್ನು ನಿಮಗೆ ಮೌಖಿಕವಾಗಿ ವಿವರಿಸಿ ಹೇಳುವುದು ಕಷ್ಟ. ಅದೇ ದೊಡ್ಡ ಮಕ್ಕಳಿಗೆ ಹಾಗೆ ಹೇಳುವುದರ ಪರಿಣಾಮ ಗೊತ್ತಿರುತ್ತದೆ. ಒಂದೋ ಹೊಡೆತ, ಇಲ್ಲವೇ ಬೈಗುಳ. ಒಟ್ಟಿನಲ್ಲಿ 'ನನಗೆ ಶಾಲೆ ಇಷ್ಟವಿಲ್ಲ' ಎಂದು ಮಕ್ಕಳು ಹೇಳುವುದನ್ನು ಅಪ್ಪ–ಅಮ್ಮ ಸುಲಭವಾಗಿ ಸ್ವೀಕರಿಸಲಾರರು! ಹೀಗಾಗಿ ಮನಃಪೂರ್ತಿ ಇಷ್ಟವಿರದಿದ್ದರೂ ಹೆಚ್ಚಿನ ಮಕ್ಕಳು 'ಇದು ಅನಿವಾರ್ಯ' ಎಂದು ಶಾಲೆಗೆ ಹೋಗುತ್ತಾರೆ. ಆದರೆ ಹಾಗೆ ಶಾಲೆಯ ಜೀವನವನ್ನು ಸುಮ್ಮನೆ ಸವೆಸದೆ, ಮಕ್ಕಳು ಸಂತೋಷಿಸುವ ಹಾಗೆ ಮಾಡಬೇಕಾದ್ದು ಸಮಾಜದ ಕರ್ತವ್ಯ.

'ಶಾಲೆಗೆ ಹೋಗಲೇಬೇಕು' ಎಂಬ ನಿಯಮವನ್ನು ಒಪ್ಪಿಕೊಂಡು ಅನಿವಾರ್ಯವಾಗಿ ಹೋಗುವ ಹೆಚ್ಚಿನ ಮಕ್ಕಳಲ್ಲಿ ಗಂಭೀರ ಸಮಸ್ಯೆಗಳಿರಲಾರದು. ಆದರೆ ಪ್ರತಿಶತ 20ರಷ್ಟು ಮಕ್ಕಳಲ್ಲಿ ನಿರ್ದಿಷ್ಟ ಸಮಸ್ಯೆಗಳಿರುತ್ತವೆ. ಅವುಗಳಲ್ಲಿ ಪ್ರಮುಖವಾದದ್ದನ್ನು ಹೀಗೆ ಪಟ್ಟಿ ಮಾಡಬಹುದು:

* ಬೌದ್ಧಿಕ ಸಾಮರ್ಥ್ಯಕ್ಕೂ, ಕಲಿಯಬೇಕಾದ ಪಾಠಕ್ಕೂ ತಾಳೆಯಾಗದಿರುವುದು, ಕಲಿಕೆಯಲ್ಲಿ ನಿರ್ದಿಷ್ಟ ಅಸಾಮರ್ಥ್ಯ.

* ಕಲಿಕೆ ಆಸಕ್ತಿಪೂರ್ಣ ಆಗದಿರುವುದು ('ಯಾವಾಗ್ಲೂ ಬರೆಯೋದು, ಓದೋದು ಬೋರ್ ಅಮ್ಮಾ..!)

* ಅತಿಯಾದ ಹೊರೆ–– ಸಿಕ್ಕಾಪಟ್ಟೆ ಹೋಂವರ್ಕ್. ಹೋಂವರ್ಕ್ ಬರೆಯದಿದ್ದರೆ ಶಿಕ್ಷೆ, ಹೊಡೆಯುವಿಕೆ ಇತ್ಯಾದಿ.

* ಶಾಲೆಗಳಲ್ಲಿ ಇತರ ಮಕ್ಕಳಿಂದ ಕಿರುಕುಳ.

* ಮಗುವಿನ ದೈಹಿಕ ಆರೋಗ್ಯ ಸರಿ ಇಲ್ಲದಿರುವುದು.

* ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳು–– ಖಿನ್ನತೆ, ಆತಂಕ, ಅಪ್ಪ–– ಅಮ್ಮಂದಿರ ನಡುವಣ ಕಲಹಗಳಿಂದ ಮಕ್ಕಳಲ್ಲಿ ಭಯ, ಅತಿ ಚಟುವಟಿಕೆ– ಇತ್ಯಾದಿ.

* ಇತರ ಸಹಪಾಠಿಗಳಿಂದ ಪ್ರತ್ಯೇಕಿಸಲ್ಪಡುವ ಸನ್ನಿವೇಶಗಳು.